16

# ನಂಬಿಕೆಯನ್ನು ಕಾಪಾಡಿಕೊಳ್ಳಿರಿ (ಯೂದ 3-25)

ಪ್ರತಿಯೊಬ್ಬ ಕ್ರೈಸ್ತನು ಸಭೆಯಲ್ಲಿ ಉಂಟಾಗುವ ಭಿನ್ನಾಭಿಪ್ರಾಯದ, ಅಪಾರ್ಥದ ಮತ್ತು ಘರ್ಷಣೆಗೆ ಉತ್ತರವನ್ನು ಕಂಡುಕೊಳ್ಳಲೇಬೇಕು. ಯಾವ ಪ್ರಸಂಗಿಗಳು ಮತ್ತು ಬೋಧಕರುಗಳು ಕ್ರಿಸ್ತನ ಸೇವೆಯಲ್ಲಿ ತಮ್ಮ ಹೆಚ್ಚು ಶಕ್ತಿಯನ್ನು ವ್ಯಯ ಮಾಡುತ್ತಾರೋ, ಅಂಥವರಿಗೆ ಈ ವಿಷಯ ಪ್ರಾಮುಖ್ಯವಾಗಿದೆ. ಸಭೆಯಲ್ಲಿ ಉಂಟಾಗುವ ಘರ್ಷಣೆಗಳನ್ನು ಸಮತೋಲನದಲ್ಲಿ ಇಡಲು ಯೂದನ ಮಾತುಗಳು ಸಹಾಯಕವಾಗುತ್ತದೆ.

## ದೇವರನ್ನು ನಿರಾಕರಿಸುವವನು ತೀರ್ಪಿಗೆ ಒಳಗಾಗುವನು (ವಚನಗಳು 3-7)

ಯೂದನು ಅವರೊಂದಿಗೆ ಹ್ರದುವಾದ ರಕ್ಷಣೆಯ ವಿಷಯದಲ್ಲಿ ಬರೆಯುವದಕ್ಕೆ ಪೂರ್ಣಸಕ್ತಿಯುಳ್ಳವನಾಗಿದ್ದನು (ವಚನ 3). ಕ್ರೈಸ್ತರನ್ನು ಒಟ್ಟು ಗೂಡಿಸುವಂಥ ವಿಷಯಗಳನ್ನು ಬರೆದರೆ ಅವುಗಳು ಅವರನ್ನು ಉತ್ತೇಜಿಸಿ ಅವರ ನಂಬಿಕೆಯನ್ನು ಅಭಿವೃದ್ಧಿಪಡಿಸುತ್ತದೆ. ನಿರ್ದಿಷ್ಟ ವಿಷಯಗಳಾದ ಪ್ರೀತಿ, ಬಿಡುಗಡೆ ಮತ್ತು ರಕ್ಷಣೆಯ ಸಂದೇಶವು ಸಾರಲ್ಪಟ್ಟಿರುವಾಗ, ಯಾಕೆ ಸುಳ್ಳು ಬೋಧಕರ ಬೋಧನೆಗಳೊಂದಿಗೆ ಸಂಧಾನ ಮಾಡಿಕೊಳ್ಳಬೇಕು? ಯೂದನಿಗೆ ಈ ವಿಷಯ ಪ್ರಮುಖವಾಗಿತ್ತು. ಅವರು ಕ್ರಿಸ್ತನ ಸುವಾರ್ತೆಯೊಂದಿಗೆ ಸಂಧಾನದ ಒಪ್ಪಿಗೆಯನ್ನು ಮಾಡಿಕೊಳ್ಳುವಾಗ, ಕ್ರೈಸ್ತರು ತಾವು ಸಂತೋಷದಿಂದ ಅನುಭವಿಸುತ್ತಿದ, "ಸಾಮಾನ್ಯವಾದ ರಕ್ಷಣೆಯನ್ನು" ನಷ್ಟ ಪಡಿಸಿಕೊಳ್ಳುವಂಥ ಅಪಾಯದಲ್ಲಿದ್ದರು.

ಪೇತ್ರನಂತೆಯೇ, ಯೂದನು ಸಹ ತನ್ನ ಓದುಗರು, ಆದಿಯಲ್ಲಿ ಪಡಕೊಂಡಿದ್ದ ವಾಕ್ಯವು ಅವರಿಗೆ ಸಾಕಾಗಿತ್ತು ಎಂಬುದಾಗಿ ಅವರು ತಿಳುಕೊಳ್ಳಬೇಕೆಂದು ಅಪೇಕ್ಷಿಸಿದನು. ಅಪೊಸ್ತಲರ ಮೂಲಕವಾಗಿಯೂ ಮತ್ತು ಪ್ರೇರಣೆ ಹೊಂದಿದ್ದ ದೇವ ದಾಸರ ಮೂಲಕವಾಗಿಯೂ ದೇವ ಜನರಿಗೆ ಶಾಶ್ವತವಾಗಿರುವಂತೆ "ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳಬೇಕಿತ್ತು" (ವಚನ 3; ಹೋಲಿಸು 2 ಪೇತ್ರ 1:3). ಸಭೆಯಲ್ಲಿ "ಕಳ್ಳತನದಿಂದ ನುಸುಳಿದ್ದವರ" ಮುಖಾಂತರ ಅವರಿಗೆ ಯಾವ ವಿದವಾದ ದಿವ್ಯ ಜ್ಞಾನದ ಅವಶ್ಯಕತೆಯೂ ಇರಲಿಲ್ಲ (ವಚನ 4; ಪೇತ್ರನು ಸಹ "ರಹಸ್ಯವಾಗಿ ಪರಿಚಯಿಸುವರು" ಎಂದು 2 ಪೇತ್ರ 2:1ರಲ್ಲಿ ತಿಳಿಸಿದ್ದಾನೆ). ಸುಳ್ಳು ಬೋಧಕರುಗಳು ತಮ್ಮನ್ನು ತಾವೇ ಪರಿಚಯಿಸಿ ಕೊಳ್ಳುವರು ಎಂದು ನಾವು ನಿರೀಕ್ಷಿಸಿಕೊಳ್ಳಲಾಗುವದಿಲ್ಲ. ಅವರು ತಾಳ್ಮೆಯ ಹಾಗೂ ಆತ್ಮೀಯವಾದ ದೂತರುಗಳಂತೆ ಮುಖವಾಡವನ್ನು ಧರಿಸಿರತ್ತಾರೆ.

ಕ್ರೈಸ್ತರು, ಪ್ರಾಯೋಗಿಕವಾದ ಸಂಗತಿಗಳಿಂದ "ಸಿದ್ಧಾಂತವನ್ನು" ಪ್ರತ್ಯೇಕಿಸುತ್ತಾರೆ. ಯೇಸು ಸುಳ್ಳು ಪ್ರವಾದಿಗಳ ಕುರಿತಾಗಿ "ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ" ಎಂದು ಹೇಳಿದ್ದಾನೆ (ಮತ್ತಾಯ 7:16). ಯೂದನು ಸಹ ಇದನ್ನೇ ಹೇಳಿ ಸುಳ್ಳುಗಾರರು ತಮ್ಮ ಸುಳ್ಳಿನ ಜೀವಿತದಿಂದ ತಾವು ಯಾರು ಎಂಬುದಾಗಿ ತಿಳಿಸುತ್ತಾರೆ ಯೂದನ ಓದುಗರನ್ನು ತೊಂದರೆಗೆ ಸಿಲುಕಿಸಿದ ಸುಳ್ಳು ಪ್ರವಾದಿಗಳ ಕುರಿತಾಗಿ ಈ ಕೆಳಕಂಡ ವಿವರಗಳನ್ನು ನೀಡಲಾಗಿದೆ: (1) ಅವರು ಭಕ್ತಿಹೀನವಾದ ಜೀವಿತವನ್ನು ಜೀವಿಸುತ್ತಿದ್ದರು; (2) ದೇವರ ಕೃಪೆಯನ್ನು ನಾಚಿಕೆಗೆಟ್ಟ ಕಾರ್ಯಗಳಿಗೆ ಬದಲಾಯಿಸುವವರು; ಮತ್ತು (3) ನಮ್ಮ ಒಬ್ಬನೇ

ಒಡೆಯನೂ ಕರ್ತನೂ ಆಗಿರುವ ಯೇಸು ಕ್ರಿಸ್ತನನ್ನು ಅರಿಯದವರು ಆಗಿದ್ದಾರೆ (ವಚನ 4). ನಾಲ್ಕು ಬಾರಿ ವಿವಾಹ ವಿಚ್ಛೇದನವನ್ನು ಪಡೆದವನಿಂದ ದಾಂಪತ್ಯ ಜೀವನದ ಸಲಹೆಗಳನ್ನು ಪಡೆಯುವುದು ಕಷ್ಟಕರವಾಗುತ್ತದೆ. ಅದೇ ರೀತಿಯಲ್ಲಿ ದೈವಭಕ್ತಿ ಇಲ್ಲದವರಿಂದ ವಾಕ್ಯ ಕೇಳುವುದು ಕಷ್ಟಕರವಾಗುತ್ತದೆ. ಅಪೋಕ್ರಿಫ ಪುಸ್ತಕದ, ಸಿರಾಕನ ವಿವೇಕವು ಈ ಮುಂದಿನ ಮಾರ್ಗದಶವನವನ್ನು ನೀಡುತ್ತದೆ: "ಒಂದು ವೇಳೆ ಮನುಷ್ಯನು ತನ್ನ ವರ್ತನೆಯ ಬಗ್ಗೆ ವಿವೇಕ ವುಳ್ಳವನಾಗಿದ್ದರೆ, ಅವನು ಮಾತನಾಡುವಾಗ, ಅವನ ಆಲೋಚನೆಯು ಭರವಸದಾಯಕವಾ ಗಿರುತ್ತದೆ."[1] ನಿಜವಾದಂಥ ಕ್ರೈಸ್ತ ವಿಶ್ವಾಸವನ್ನು ಜೀವನಕ್ಕೆ ಸಂಬಂಧ ಪಡದ ವಿಷಯದಲ್ಲಿ ನಿರ್ಮಾಣವಾದ ಬರವಣಿಗೆ ಎಂದು ತಿಳಿಯಬಾರದು. ಪೇತ್ರನ ಹಾಗೆ (2 ಪೇತ್ರ 2:4-6), ಪುರಾತನ ಕಾಲದಲ್ಲಿ ಭಕ್ತಿ ಇಲ್ಲದವರನ್ನು ದೇವರು ತೀರ್ಪುಮಾಡಿದ ಸಾಕ್ಷಿಯನ್ನು ಆಧರಿಸಿ, ಸುಳ್ಳು ಪ್ರವಾದಿಗಳನ್ನೂ ಸಹ ದೇವರು ತೀರ್ಪಿಗೆ ಒಳಪಡಿಸುವನು ಎಂದು ಯೂದನು ಸಹ ತಿಳಿಸಿದ್ದಾನೆ. ಅವನ ಎರಡು ಉದಾಹರಣೆಗಳು ಪೇತ್ರನು ಹೇಳಿದಂತೆಯೇ ಇರುತ್ತದೆ - ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ ದೇವದೂತರಿಗೆ ದೇವರು ನಿತ್ಯವಾದ ಬೇಡಿಗಳನ್ನು ಹಾಕಿದಂತೆ ಮತ್ತು ಸೋದೋಮ್ ಮತ್ತು ಗೋಮೋರಗಳನ್ನೆ ತೀರ್ಪು ಮಾಡಿದಂತೆ (ವಚನಗಳು 6, 7). ಪೇತ್ರನು ಪುರಾತನ ಕಾಲದ ಜನರನ್ನು ದೇವರು ತೀರ್ಪು ಮಾಡಿದನು ಎಂಬ ವಿಷಯಕ್ಕೆ ಸಂಬಂಧಿಸಿದಂತೆ, ಇಸ್ರಾಯೇಲ್ಯರು ಐಗುಪ್ತದಿಂದ ಹೊರ ಬಂದಾಗ ಅವರನ್ನು ಸಹ ದೇವರು ತೀರ್ಪುಮಾಡಿದನು ಎಂದು ತಿಳಿಸುವಂತೆ (ವಚನ 5), ದೇವರು ಯಾವಾಗಲೂ ನ್ಯಾಯ ನಿರ್ಣಯಿಸುವವನಾಗಿದ್ದಾನೆ, "ಯೆಹೋ ವನು ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬನಿಗೆ ಸಲ್ಲಿಸುವದಿಲ್ಲ, ಆತನು ದಹಿಸುವ ಅಗ್ನಿಯಾಗಿದ್ದಾನೆ" (ಧರ್ಮೋಪದೇಶಕಾಂಡ 4:24).

ಸೋದೋಮ್ ಮತ್ತು ಗೋಮೋರದವರು ಸ್ವಭಾವಕ್ಕೆ ವಿರೋಧವಾಗಿ ಪಾಪಮಾಡಿದ್ದಲ್ಲಿ, ದೇವರಿಂದ ತೀರ್ಪು ಹೊಂದಿದರು ಎಂಬ ವಿಷಯಕ್ಕೆ ಉದಾಹರಣೆಯಗಿದ್ದಾರೆ. "ಶಾರೀರಕ ವಾದ ಮತ್ತು ..." ಅನೈತಿಕತೆ, ಅಥವಾ ಜಾರತ್ವ, NIVಯಲ್ಲಿ ಅವರು ಸಲಿಂಗಕಾಮಿಗಳು ಆಗಿದ್ದರು ಎಂದು ಆದಿಕಾಂಡ 19ರಲ್ಲಿ ದಾಖಲಾಗಿದೆ. ಈಗಿನ ದಿವಸಗಳಲ್ಲೂ ಬೋಗಗಳ್ನು ಅನುಭವಿಸುತ್ತಿರುವವರು ಸಹ ಸೋದೋಮ್ ಮತ್ತು ಗೋಮೋರ್‌ಗಳಿಗೆ ಉಂಟಾದಂತ ನ್ಯಾಯ ತೀರ್ಪಿಗೆ ಒಳಗಾಗುವರು ಎಂದು ಯೂದನು ತಿಳಿಸುತ್ತಿದ್ದಾನೆ, "ಅಲ್ಲಿಯವರು ತೀರ್ಪುನ್ನು ಹೊಂದಿ ನಿತ್ಯವಾದ ಬೆಂಕಿಯ ನಾಶಕ್ಕೆ ಒಳಗಾಗಿದ್ದಾರೆ" (ವಚನ 7). ಆ ಪಟ್ಟಣಗಳಿಗೆ ನ್ಯಾಯ ತೀರ್ಪುಮಾಡಿದವನು ನಮಗೂ ತೀರ್ಪುಮಾಡುವನು.

## ದೇವರು ದೈವ ಭಕ್ತಿಯಿಲ್ಲದ ವರಸೊಕ್ಕನ್ನು ತಿರಸ್ಕರಿಸುತ್ತಾನೆ (ವಚನಗಳು 8-16)

ಯೇಸುವಿನ ದಿಗಳಲ್ಲಿ ಜೀವಿಸಿದಂತ ಪರಿಸಾಯರು ಅಲ್ಪ ಬುದ್ದಿಯ ಸೊಕ್ಕನ್ನು ಹೊಂದಿದ್ದರು. ಪರಿಸಾಯರ ಸೊಕ್ಕನ್ನು ಸುಲಭವಾಗಿ ಅರಿಯಬಹುದಿತ್ತು, ರಹಸ್ಯ ವಾದ ಸೊಕ್ಕಿನ ಸ್ವಭಾವವು ತೆರೆದ - ಹೃದಯದ ಸಹಿಸುವಿಕೆಯ ಮುಖವಾಡವನ್ನು ಧರಿಸಿರುತ್ತದೆ, ಸುಳ್ಳು ಪ್ರವಾದಿಗಳ ಕುರಿತಾಗಿ ಅವರು ಈ ರೀತಿಯವರು ಎಂದು ಯೂದನು ತಿಳಿಸಿದ್ದಾನೆ. ಅವರು "ದೇವರ ಕೃಪೆಯನ್ನು ನಾಚಿಕೆಗೆಟ್ಟ ಕೆಲಸಕ್ಕೆ ಬದಲಾಯಿಸಿಕೊಂಡರು" (ವಚನ 4), "ಶರೀರವನ್ನು ಮಲಿನ ಮಾಡಿಕೊಂಡರು" (ವಚನ 8), "ತಮ್ಮ ದುರಾಶೆಯನ್ನು ಅನುಸರಿಸಿ ನಡೆಯುವವರೂ ಆಗಿದ್ದಾರೆ" (ವಚನ 16). ಅವರ ಶಾರೀರಿಕ ಆಶೆಯ ಸ್ವಾತಂತ್ರವನ್ನು ಖಂಡಿಸಿದ ಪರಲೋಕ ಶಕ್ತಿಯನ್ನು ಮತ್ತು ಭೂಮಿಕದ ಅಧಿಕಾರವನ್ನು ಸೊಕ್ಕಿನಿಂದ ನಿರಾಕರಿಸಿದ್ದರು. ತಾವು ತೆರೆದ ಹೃದಯದಿಂದ ಸಹನೆಯನ್ನು ಹೊಂದಿದವ ರೆಂದು ತಿಳಿದು ಸಭೆಯಲ್ಲಿದ್ದ ಉನ್ನತವಾದ ನೈತಿಕ ಮೌಲ್ಯಗಳನ್ನು ಹೀನೈಸಿದರು.

ಪ್ರದಾನ ದೂತನಾದ ಮಿಕಾಯೇಲನು ಮೋಶೆಯ ಶವದ ವಿಷಯದಲ್ಲಿ ವ್ಯಾಜ್ಯ ಮಾಡಿ

ವಾಗ್ವಾದ ಮಾಡಿದಾಗ ಅವನು ಸೈತಾನನ ಮೇಲೆ ದೂಷಣಾಭಿಪ್ರಾಯವನ್ನು ಹೇಳಲು ಧೈರ್ಯಗೊಳ್ಳಲಿಲ್ಲ. ಆದರೆ ಈ ಜನರು ತಮಗೆ ಗೊತ್ತಿಲ್ಲದ ಎಲ್ಲವನ್ನು ದೂಷಿಸುತ್ತರೆ (ವಚನ 9). ದೇವರ ದೂತರ ಕುರಿತಾಗಿ, ಬೈಬಲ್‌ನ ಅನೇಕ ಭಾಗಗಳಲ್ಲಿ ತಿಳಿಸಿದ್ದರೂ ಮಿಕಾಯೇಲನು ಮತ್ತು ಗಬ್ರಿಯೇಲನು ಅವರ ಹೆಸರಿನಿಂದ ಗುರುತಿಸಲ್ಪಟ್ಟಿದ್ದಾರೆ. ದಾನಿಯೇಲನ (10:13, 21; 12:1) ಗ್ರಂಥದಲ್ಲಿ ಮಿಕಾಯೇಲನ ಹೆಸರನ್ನು ಮೂರು ಸಾರಿ ತಿಳಿಸಲಾಗಿದೆ ಮತ್ತು ಪ್ರಕಟಣೆ ಪುಸ್ತಕದಲ್ಲಿ  (12:7) ಒಂದು ಸಾರಿ ತಿಳಿಸಲಾಗಿದೆ.

ಸುಳ್ಳು ಪ್ರವಾದಿಗಳ ಕುರಿತಾಗಿ ಯೂದನ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿರುವದಿಲ್ಲ, ಅದರ ದೃಷ್ಟಾಂತವು ವ್ಯತ್ಯಾಸವುಳ್ಳ ವಿಷಯವಾಗಿದೆ. ಮೋಶೆಯ ಕುರಿತಾಗಿ ಮಿಕಾಯೇಲನು ಸೈತಾನನೊಂದಿಗೆ ಮಾಡಿದ ವಾಗ್ವಾದದ ಕುರಿತು ಬೇರೆ ಯಾವ ವಾಕ್ಯಭಾಗದಲ್ಲಿಯೂ ನಮೂದಾಗಿರುವದಿಲ್ಲ. ಪುರಾತನ ಕಾಲದ ಬರವಣಿಗೆಗಾರರು ಮೋಶೆಯ ಕುರಿತಾಗಿ ಮಾಡಿರುವ ಊಹೆಯಲ್ಲಿ ಇದನ್ನು ತಿಳಿಸಲಾಗಿದೆ. ಈ ಪುರಾತನ ಕಾಲದ ಹೇಳಿಕೆಗಳಲ್ಲಿ ಕೆಲವು ಮಾತ್ರ ಉಳಿದಿರು ತ್ತವೆ ಎಂದು ತಿಳಿಸಲಾಗಿದೆ. ಇದರ ಮೂಲದಿಂದಲೇ ಯೂದನು ಈ ವಿಷಯವನ್ನು ಬರೆದಿದ್ದಾನೆ. ನಂತರ ವಚನ 14, 15ರಲ್ಲಿ ಯೂದನು ಇನ್ನೊಂದು ಮೂಲದಿಂದ ಬರೆಯುತ್ತಿದ್ದಾನೆ. ಅದು ಹನೋಕನ ಪುಸ್ತಕ, ಹಳೆ ಮತ್ತು ಹೊಸ ಒಡಂಬಡಿಕೆಯ ನಡುವೆಯ ಸಮಯದಲ್ಲಿ ಬರೆದಂತ ಪುಸ್ತಕವಾಗಿರುತ್ತದೆ. ಬೈಬಲ್ ಸಂಬಂಧಪಡದೆ ಇರುವ ಪುಸ್ತಕದ ಹೇಳಿಕೆಯು ಹಲವಾರು ಪ್ರಶ್ನೆಗಳನ್ನು ಮುಂದಿಡುತ್ತದೆ. ಆ ಪುಸ್ತಕಗಳು ಪ್ರೇರಿಸಲ್ಪಟ್ಟಿರುವವೆ? ಮಿಕಾಯೇಲನಿಗೂ ಸೈತಾನನಿಗೂ ವಾಗ್ವಾದ ಆದವೆ? ಯೂದನು ಹೇಳಿದ ವಿಷಯಕ್ಕೆ ಆದಿಕಾಂಡ 5:21-24 ಹೋಲಿಕೆಯಾಗಿವೆಯೇ? ಕ್ರೈಸ್ತರ ಈ ಪ್ರಶ್ನೆಗಳ ಕುರಿತಾಗಿ ಪಂಡಿತರುಗಳು ಆದಿಯಿಂದಲೂ ಚರ್ಚಿಸುವರಾಗಿದ್ದಾರೆ.

ಪೌಲ ಮತ್ತು ಯೂದ ಇಬ್ಬರೂ ಸಹ ಬೈಬಲ್‌ಗೆ ಸಂಬಂಧ ಪಡದ ವಿಷಯಗಳನ್ನು ನಮೂದಿಸಿರುತ್ತಾರೆ ಎಂದು (ನೋಡಿರಿ 2 ತಿಮೊಥೆ 3:8). ವೇದಕ್ಕೆ ಸಂಬಂಧಪಡದ ಯೆಹೋದ್ಯ ಬರಹಗಾರರು ಹೇಳಿಕೆಗಳನ್ನು ನಮೂದಿಸಿದ್ದಾರೆ. ಅದೇ ರೀತಿಯಲ್ಲಿ ಪೌಲನು ಸಹ ಅನ್ಯ ಕವಿಗಳ ಹೇಳಿಕೆಗಳನ್ನು ನಮೂದಿಸಿದ್ದಾನೆ (ಅಪೊಸ್ತಲಕೃತ್ಯಗಳು 17:28; ತೀತ 1:12). ಪೌಲನಾಗಲಿ ಅಥವಾ ಯೂದನಾಗಲೀ, ಚರ್ಚಿಸಿ, ಈ ವಿಷಯಗಳನ್ನು ಒಪ್ಪಿಕೊಳ್ಳಲಿಲ್ಲ. ಯೇಸು ಸಾಮ್ಯಗಳನ್ನು ಉಪಯೋಗಿಸಿದಂತೆ, ಅಥವಾ ಪ್ರಸಂಗಿಗಳು ಭಾರತೀಯ ಕಥೆಗಳನ್ನು ಉಪಯಗಿಸುವಂತೆ, ಯೂದನು ಸಹ ತಮಗೆ ತಿಳಿದಿದ್ದ, ದಾಖಲುಗಳ ಮೂಲಕ, ತನ್ನ ಓದುಗರಿಗೆ ಬೋಧಿಸಿದನು.

ಇತರರು ಈ ವಿಷಯವನ್ನು ಒಪ್ಪದೆ ಇರುವ ಕಾರಣಗಳು, ಹನೋಕನ ಪುಸ್ತಕದಿಂದ ಮೋಶೆಯ ದೇಹದ ವಾಗ್ವಾದ ಕುರಿತಾಗಿ ಯೂದನು ಬರೆದು, ಪ್ರೇರಣೆ ಯಿಂದ ಉಂಟಾದ ವಾಕ್ಯಗಳಂತೆಯೇ ಬೋಧಿಸಿರುವನು ಎಂಬುದಾಗಿ, ಯೂದನು ಯಾವುದೇ ಮೂಲದಿಂದ ಮಾಹಿತಿಗಳನ್ನು ಪಡೆದಿರಬಹುದು, ಅವನು ದಾಖಲು ಮಾಡಿದಂತೆಯೇ ಕಾರ್ಯಗಳು ಜರುಗುತ್ತಿದ್ದವು.

ಅವನು ಪ್ರೇರಣೆ ಇಲ್ಲದ ಪುಸ್ತಕಗಳಿಂದ ಹೇಳಿಕೆಗಳನ್ನು ನೀಡಿದನು ಎಂಬ ಸಮಸ್ಯೆಯು ಇದ್ದರೂ, ಯೂದನು ತೋರಿದ ಮುಖ್ಯ ಅಂಶವನ್ನು ನಾವು ಮರೆಯಬಾರದು. ಸುಳ್ಳು ಬೋಧಕರುಗಳು ಧೈರ್ಯವಾಗಿ (ಅಧಿಕಾರವನ್ನು ತಿರಸ್ಕರಿಸಿದರು) ದೇವದೂತರುಗಳು ಮಾಡಲು, ಭಯಪಟ್ಟಂಥ ವಿಷಯಗಳನ್ನು ಅವರು ಮಾಡಿದರು. ಅವರ ಸೊಕ್ಕಿನ ನಿಮಿತ್ತವಾಗಿ ಪ್ರೇರಿತರಾದವರಾಗಿದ್ದರಿಂದ ಬೋಧಿಸಲು ಅಸಾಧ್ಯವಾಯಿತು. ಯೂದನು ಅವರನ್ನು ಹಳೆ ಒಡಂಬಡಿಕೆಯಲ್ಲಿ, ದೇವರ ಅಧಿಕಾರಕ್ಕೆ ಒಳಗಾಗದೆ, ಪ್ರಸಿದ್ಧಿ ಹೊಂದಲಾರದೆ ಇದ್ದವರ ಜೊತೆ ಹೋಲಿಸಿದನು (ಆದಿಕಾಂಡ 4:1-12), ಕಾಯಿನನಂತೆ ದೇವರ ಮನಸ್ಸಿಗೆ ವಿರೋಧವಾದದನ್ನು ಮಾಡಿದರು (ಅರಣ್ಯ ಕಾಂಡ 22), ಬಿಳಾಮನಂತೆ, ಅವರ ಬೋಧನೆಗಳು ಮರಾ

ಟಕ್ಕೆ ಇದ್ದವು; ಕೋರಹನ ಹಾಗೆ ಅವರ ಅಂತ್ಯವು ನಿರ್ದಲಿಸಲ್ಪಟ್ಟಿತು (ಅರಣ್ಯ ಕಾಂಡ 16).

ಸುಳ್ಳು ಪ್ರವಾದಿಗಳ ಬಣ್ಣವುಳ್ಳ ಹೇಳಿಕೆಗಳು ಈ ಮುಂದಿನಂತಿವೆ. ಕ್ರೈಸ್ತ "ಪ್ರೇಮ ಭೋಜನಗಳು" ಅವರು ಮನಸ್ಸಾಕ್ಷಿ ಇಲ್ಲದವರಾಗಿ, ಸೊಕ್ಕಿನಿಂದಲೂ ಮತ್ತು ಧೈರ್ಯದಿಂದಲೂ ಅವರ ಜೊತೆಯಲ್ಲಿ ಊಟಮಾಡಿದರು (ವಚನ 12). ಒಂದು ವೇಳೆ ಅವರು ಕೊರಿಂಥದ ಕೆಲವು ಕ್ರೈಸ್ತರ ಹಾಗೆಯೂ ಇರಬಹುದು. ಅವರು ಸಾಧಾರಣವಾದ ಭೋಜನವನ್ನು ಪ್ರೇಮ ಭೋಜನವನ್ನಾಗಿ ಮಾಡಿ, ಕುಡಿಯುವುದರಲ್ಲಿ ಸ್ವ-ಮಗ್ನರಾಗಿದ್ದರು. ಅವರು ವಾಗ್ದಾನಕ್ಕೆ ಪ್ರತಿಯಾಗಿ ನೀತಿಯ ಫಲವನ್ನು ನೀಡಲಿಲ್ಲ. ಅವರು ನೀರಿಲ್ಲದ ಮೋಡದಂತಿದ್ದಾರೆ, ಅವರು ಗಾಳಿಯಿಂದ ಬಡಿಯಲ್ಪಟ್ಟವರಾಗಿದ್ದಾರೆ. ಅವರು ಬೇರು ಸಹಿತ ಕಿತ್ತು ಬಿದ್ದ ಮರಗಳು, ಹಣ್ಣು ಬಿಡದೆ ಇರುವವರು. ಜೀವವಿಲ್ಲದೆ ಎರಡು ಸಾರಿ ಮೃತರಾದವರು ಅವರು ಸಮುದ್ರದ ಹುಚ್ಚು ತೆರೆಗಳೂ ಆಗಿದ್ದಾರೆ, ಅಲೆಯುವ ನಕ್ಷತ್ರಗಳು ಆಗಿದ್ದಾರೆ ಇವರ ಪಾಲಿಗೆ ಕಾರ್ಗತ್ತಲೆಯು ಸದಾಕಾಲ ಇಟ್ಟಿರುವುದು (ವಚನಗಳು 12, 13).

ಕ್ರಿಸ್ತನ ಜನನದ ಪೂರ್ವದ ಎರಡು ನೂರು ವರ್ಷಗಳ ಹಿಂದೆ ಹನೋಕನ ವೇದಗಳು ಬರೆಯಲ್ಪಟ್ಟಿದ್ದವು. ಐಥಿಯೋಫಿಯ ಭಾಷೆಯ ಬರವಣಿಗೆಗಳಲ್ಲಿ ಮಾತ್ರ ಅದು ಸಂರಕ್ಷಿಸಲ್ಪಟ್ಟಿದೆ, ಯೂದನು ವಚನ 14 ಮತ್ತು 15ರಲ್ಲಿ ತಿಳಿಸಿರುವ ಮೂರರಲ್ಲಿ ಒಂದು ಅಂಶವ ಗ್ರೀಕ್ ಭಾಷೆಯಲ್ಲಿ ಸಂಗ್ರಹಿಸಲಾಗಿದೆ. ಹನೋಕನ್ ಪುಸ್ತಕವು ಯೂದನಿಗೆ ಪ್ರಾಮುಖ್ಯವಾಗಿತ್ತು ಯಾಕಂದರೆ, ಅದರಲ್ಲಿ ದೇವರು ಅನೀತಿವಂತರಿಗೆ ತೀರ್ಪುಮಾಡುವನು ಎಂದು ಬರೆಯಲ್ಪಟ್ಟಿತು. 5 ರಿಂದ 7 ವಚನದವರೆಗೆ ಅದು ಹಿನ್ನೆಲೆಯಾಗಿತ್ತು. "ಸಾವಿರಾರು ಪರಿಶುದ್ಧರ ಜೊತೆಯಲ್ಲಿ" ದೇವರು ಬರುವವನಾಗಿ, ಅವನ ಚಿತ್ತಕ್ಕೆ ವಿರೋಧವಾಗಿ ಜೀವಿಸುವವರನ್ನು ತೀರ್ಪುಮಾಡುವನು.

ವಚನ 16ರಲ್ಲಿ ಗ್ರಂಥ ಕರ್ತನು ಸುಳ್ಳು ಪ್ರವಾದಿಗಳ ಕುರಿತಾಗಿ ಮೂರು ವಿಶೇಷವಾದ ವ್ಯಾಖ್ಯಾನಗಳನ್ನು ತಿಳಿಸಿದ್ದಾನೆ: (1) ಅವರು ಗುಣುಗುಟ್ಟುವವರೂ ನಿಂದಿಸುವವರು; (2) ತಮ್ಮ ಸ್ವಂತ ದುರಾಶೆಗಳನ್ನು ಅನುಸರಿಸುವವರು; (3) ಇವರು ಸ್ವ ಪ್ರಯೋಜನಕ್ಕಾಗಿ ಮುಖ ಸ್ತುತಿ ಮಾಡುವವರು. ಸಭೆಗಳು ಯಾವ ರೀತಿಯಲ್ಲಿ ನಾಶವಾಗುತ್ತದೆ ಎಂಬ ನೇರ ನಕ್ಷೆಯನ್ನು ಯೂದನು ನೀಡಿದನು. ಪರಲೋಕದ ಈ ಬದಿಯಲ್ಲಿ ಪರಿಪೂರ್ಣವಾದ ಸಭೆಯನ್ನು ಕಾಣದೆ ಇರುವುದಾದರೂ, ದೂರು ಹೇಳುವದಕ್ಕೆ ಯಾವುದಾದರು ಸಂಗತಿಗಳು ಇರುತ್ತವೆ. ತಪ್ಪು ಕಂಡು ಹಿಡಿಯುವವರು ನ್ಯಾಯತೀರ್ಪಿನಲ್ಲಿಯೂ ತಪ್ಪನ್ನು ಹುಡುಕಿ ಪ್ರಾಮುಖ್ಯತೆ ಇಲ್ಲದ ವಿಷಯಗಳಲ್ಲೂ ತಪ್ಪನ್ನು ಕಂಡು ಹಿಡಿಯುತ್ತಾರೆ. ಇತರರನ್ನು ಸಹೋದರರಿಗೆ ವಿರೋಧವಾದದ್ದು ಎಂದು ಯೂದನು ತಿಳಿಸಿದ್ದಾನೆ, ಇವರು ದೋಷವನ್ನು ಕಂಡು ಹಿಡಿಯುವದರಲ್ಲಿ ಕುಶಲರು ಆಗಿದ್ದಾರೆ.

ಅವರು ಮಾಡುವಂಥ ವಿಷಯಗಳಿಗೆ ತಮ್ಮನ್ನು ತಾವೇ ಸಂಪರ್ಕಿಸಿಕೊಂಡವರಾಗಿರುತ್ತಾರೆ ದೋಷವನ್ನು ಕಂಡುಹಿಡಿಯುವದರಿಂದಲೂ ಮತ್ತು ದೂರುವಿರುವದರಿಂದಲೂ, ಅವರು ತಮ್ಮ ದೋಷಗಳನ್ನು ಮರೆಮಾಡುತ್ತಾರೆ.ಅವರು ಶಾರೀರಿಕ ತೃಪ್ತಿಗಾಗಿ ತಮ್ಮನ್ನು ಒಪ್ಪಿಸಿಕೊಂಡಿದ್ದರು. ಅನೇಕ ಕ್ರೈಸ್ತರನ್ನು ಮೋಸಪಡಿಸುವದರಿಂದ, ತಮ್ಮ ಬಲಹೀನತೆಗಳನ್ನು ಮುಚ್ಚಿಕೊಂಡಿದ್ದರು. ತಮ್ಮನ್ನು ಹೆಚ್ಚಿಸಿಕೊಂಡು ಇತರರನ್ನು ಹೊಗಳಿದರು. ಇತರರನ್ನು ಮರುಳು ಮಾಡುವದರಲ್ಲಿ ಸಫಲರಾದರು. ಅವರು ಏನು ಮಾಡುತ್ತಿದ್ದರು ಎಂದು ಯೂದನು ಓದುಗರಿಗೆ ತಿಳಿಯಬಯಸಿದನು.

## ದೇವರು ತನ್ನವರನ್ನು ಪ್ರೀತಿಸುತ್ತಾನೆ (ವಚನಗಳು 17-23)

ಪೇತ್ರನ ಹಾಗೆ ಯೂದನು ಸಹ ಅವರು ಮೊದಲು ಹೇಳಿದ ಮಾತುಗಳನ್ನು ಜ್ಞಾಪಕಮಾಡಿಕೊಳ್ಳಿರಿ ಅಂದನು (ವಚನ 17). ಬೋಧನೆಯಲ್ಲಿ ಪುನರಾವರ್ತನೆಯು,

ಬೆಲೆಯುಳ್ಳದ್ದಾಗಿದೆ. ನಾವು ತಿಳಿದಿರುವವದನ್ನು ಆಚರಣೆಗೆ ತರುವೆವು ಎಂಬುದು ಖಾತ್ರಿಯಾಗಿರುವದಿಲ್ಲ. ಅವನು ತನ್ನನ್ನು ಹೊರತುಪಡಿಸಿ, ವಚನ 18 ಹಾಗೂ ಬಹುಶಃ 2 ಪೇತ್ರ 3:3ರಲ್ಲಿ ಅಪೊಸ್ತಲರು ಮುಂತಿಳಿಸಿರುವ ಸಂಗತಿಗಳನ್ನು ಕ್ರೈಸ್ತರು ನೆನಪು ಮಾಡಬೇಕೆಂದನು. ಮೋಸ ವಂಚನೆ ಹಾಗೂ ಸೊಕ್ಕಿನ ಮನೋಭಾವನೆಗಳಿಂದ, ಸುಳ್ಳು ಪ್ರವಾದಿಗಳು; ಕ್ರೈಸ್ತರನ್ನು ವಿಭಾಗಿಸಿದ್ದರು. ಇವರು ಬೇಧಗಳನ್ನುಂಟು ಮಾಡುವವರೂ ಪ್ರಾಕೃತ ಮನುಷ್ಯರೂ, ದೇವರಾತ್ಮವಿಲ್ಲದವರೂ ಆಗಿದ್ದಾರೆ (ವಚನ 19).

ಯೂದನು ಓದುಗರ ಸಭೆಯಲ್ಲಿ ಅವರು, ಅನುಭವಿಸುತ್ತಿದ ಗೊಂದಲಗಳಿಗೆ, ಉತ್ತರವೇನು? ಈ ಪ್ರಶ್ನೆಗಳಿಗೆ ಯೂದನು ಅತ್ಯಗತ್ಯವಾದ ಉತ್ತರಗಳನ್ನು ನೀಡಿದನು; (1) ಅತಿಪರಿಶುದ್ಧವಾದ ನಂಬಿಕೆಯನ್ನು ಆಧಾರ ಮಾಡಿಕೊಳ್ಳಿರಿ (ವಚನ 20). ಪ್ರತಿ ಕ್ರೈಸ್ತನು ತನ್ನ ಆತ್ಮೀಕ ಜೀವನದ ಜವಾಬ್ದಾರಿಯನ್ನು ಹೊತ್ತು ಕೊಳ್ಳಬೇಕು. ದೇವರು ಅಗತ್ಯತೆಗಳನ್ನು ಸರಭರಾಜು ಮಾಡುತ್ತಾನೆ, ಪ್ರತಿಯೊಬ್ಬನು ಅದನ್ನು ತನ್ನ ಆತ್ಮಿಕ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳಬೇಕು. (2) ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ (ವಚನ 21). ದೇವರು ಆವರಿಸಿಕೊಳ್ಳುವ ಪ್ರೀತಿಯಿಂದ ಯರೂ ತಪ್ಪಿಸಿಕೊಳ್ಳಲಾರರು. ಕರ್ತನಾದಂಥ ಯೇಸುವಿನ ಮೂಲಕ ದೊರಕಿದ ಪ್ರೀತಿಯಲ್ಲಿ ನಂಬಿಗಸ್ತರಾಗಿ, ಆತ್ಮೀಕ ಆಶೀರ್ವಾದವನ್ನು ಪಡೆದುಕೊಳ್ಳಬೇಕು. (3) ಯೇಸು ಕ್ರಿಸ್ತನ ಕರುಣೆಯನ್ನು ಎದುರು ನೋಡಿರಿ (ವಚನ 21). ಕರ್ತನು ಹಿಂತಿರುಗಿ ನಂಬಿಗಸ್ತರಾದವರನ್ನು ನಿತ್ಯಜೀವಕ್ಕೆ ನಡಿಸವನು ಎಂದು ಯೂದನು ತಿಳಿಸಿದನು. (4) ಸಂದೇಹ ಪಡುವವರಿಗೆ ಕರುಣೆಯನ್ನು ತೋರಿಸಿರಿ (ವಚನ 22). ಕೆಲವರು ನಂಬಿಕೆಯಲ್ಲಿ ಬಲಹೀನರಾಗುವಾಗ ಅವರಿಗೆ ಪ್ರೋತ್ಸಾಹದ ಅವಶ್ಯವಿರುತ್ತದೆ. ಭಲವುಳ್ಳವರು ಬಲಹೀನರಾದ, ಮತ್ತು ಸುಳ್ಳು ಬೋಧನೆಗಳಿಂದ ಚಂಚಲರಾದವರನ್ನು ಎದುರಿಸುತ್ತಾರೆ, ನಂತರ ಸಭೆಯು ತಕ್ಷಣವಾಗಿ ಗೊಂದಲಕ್ಕೊಳಗಾಗುತ್ತದೆ. (5) ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ (ವಚನ 23). ಸುಳ್ಳು ಪ್ರವಾದಿಗಳು ಕೆಲವರನ್ನು ದೂರಮಾಡುತ್ತಾರೆ ಅಂಥವರನ್ನು ಕಾಪಾಡಿರಿ. (6) ಭಯಯುಕ್ತರಾಗಿ ಕರುಣಿಸಿರಿ (ವಚನ 23). ಬಲಹೀನನಾದವನನ್ನು ತೀರ್ಪುಮಾಡಿ, ಅವನಿಗೆ ಮಾರ್ಗದರ್ಶನಮಾಡಿದರೆ, ಅವನನ್ನು ವೈರಿಯ ಪಾಳಯದಲ್ಲಿ ಸಂರಕ್ಷಿಸುತ್ತೀರಿ. ಪಾಪಿಯನ್ನು ದ್ವೇಷಿಸದೆ, ಅವನನ್ನು ರಕ್ಷಿಸಿರಿ.

## ಮುಕ್ತಾಯ

ಯೂದನು ತನ್ನ ಪತ್ರಿಕೆಯನ್ನು ಹೊಸ ಒಡಂಬಡಿಕೆಯ ಪ್ರಾಮುಖ್ಯವಾದ ವೇದ ಶಾಸ್ತ್ರದಿಂದ ಅಂತಿಮಗೊಳಿಸಿದನು. ಅವನು ತನ್ನ ಓದುಗರಿಗೆ, ಸುಳ್ಳು ಪ್ರವಾದಿಗಳಿಂದ ಉಂಟಾಗುವ ಅಪಾಯಗಳು ಮತ್ತು ಅವರ ಮರ್ಮಗಳು ಯಾವ ರೀತಿಯಲ್ಲಿ ಸಭೆಯನ್ನು ತೊಂದರೆಗೆ ಸಿಲುಕಿದವು ಎಂದು ತಿಳಿಸುತ್ತಿದ್ದಾನೆ. ಅವರು ನಟನೆ ಮಾಡುವವರಾಗಿ ಸಭೆಯಲ್ಲಿ ನುಸುಳಿಕೊಂಡು ಕ್ರೈಸ್ತರನ್ನು ವಿಭಾಗಿಸಿ ತೊಂದರೆ ಪಡಿಸಿದರು. ಅವರು ಅಪೊಸ್ತಲರ ಸ್ಪಸ್ತವಾದ ಬೋಧನೆಗಳಿಂದ ಭಲಹೊಂದಿ, ಆದಿಯಲ್ಲಿ ಕೇಳಿದ ಸಂದೇಶಗಳಿಗೆ ತಮ್ಮನ್ನು ಒಪ್ಪಿಸಿಕೊಡ ಬೇಕು ಎಂದು ಬೇಡಿಕೊಂಡನು. ತನ್ನ ಪತ್ರವನ್ನು ಈ ಮಾತುಗಳಿಂದ ಅಂತ್ಯಗೊಳಿಸಿದನು: "ಎಡವಿಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಪ್ರಭಾವ ಮಹತ್ವ ಆಧಿಪತ್ಯ ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊದಲೂ (ಇದ್ದ ಹಾಗೆ) ಈಗಲೂ ಯಾವಾಗಲೂ ಇರಲಿ. ಆಮೆನ್" (ವಚನಗಳು 24, 25).